# ಸಾವಿನ ಮನೆಯಲ್ಲಿ ದುಃಖದ ಕಡಲು

ಆ ಕಾಲಕ್ಕೆ ಪ್ರಾಥಮಿಕ ಶಾಲೆ, ಮಧ್ಯಮ ಶಾಲೆ ನಾಲ್ಕು ನಾಲ್ಕು ಒಟ್ಟು ಎಂಟು ವರ್ಷಗಳು ಮತ್ತು ಪ್ರೌಢಶಾಲೆ ಮೂರು ವರ್ಷಗಳ ಓದಾಗಿತ್ತು. ಮುಂದೆ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಮತ್ತು ಬಿ.ಎಸ್ಸಿ. ಬಿ.ಎ. ಮತ್ತು ಬಿ.ಕಾಂ. ತಲಾ ಎರಡು ವರ್ಷಗಳಾಗಿದ್ದವು. ಬಹಳಷ್ಟು ವಿದ್ಯಾರ್ಥಿಗಳು ಡಿಗ್ರಿಯಲ್ಲಿ ಕಲೆಗೆ ಸೇರಿದ ವಿಷಯಗಳನ್ನು (ಬಿ.ಎ.) ತೆಗೆದುಕೊಂಡರೆ ಕಡಿಮೆ ವಿದ್ಯಾರ್ಥಿಗಳು ವಾಣಿಜ್ಯ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು (ಬಿ.ಕಾಂ.) ತೆಗೆದುಕೊಳ್ಳುತ್ತಿದ್ದರು. ತೀರಾ ಕಡಿಮೆ ವಿದ್ಯಾರ್ಥಿಗಳು ಮತ್ತು ಬುದ್ಧಿವಂತ ವಿದ್ಯಾರ್ಥಿಗಳು ಮಾತ್ರ ವಿಜ್ಞಾನ ವಿಷಯಗಳನ್ನು ತೆಗೆದುಕೊಳ್ಳುತ್ತಿದ್ದರು. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆ, ಕಾಲೇಜುಗಳಿದ್ದವು. ಪ್ರೌಢಶಾಲೆ, ಕಾಲೇಜುಗಳಲ್ಲಿ ಪಾಠ ಮಾಡುವ ಅಧ್ಯಾಪಕರು ಹೆಚ್ಚಾಗಿ ಸೂಟು ಬೂಟು ಹಾಕಿಕೊಂಡು ಟೈ ಕಟ್ಟಿಕೊಂಡು ಬರುತ್ತಿದ್ದರು. ಆದರೆ ಕನ್ನಡ, ಸಂಸ್ಕೃತ, ಹಿಂದಿ ಅಧ್ಯಾಪಕರು ಕೆಲವರು ಬಿಳಿ ಬಣ್ಣದ ಕಚ್ಚೆ ಪಂಚೆ ಕಟ್ಟಿಕೊಂಡು, ಹಣೆಯಲ್ಲಿ ತಿಲಕ ಇಟ್ಟುಕೊಂಡು ತಲೆಯಲ್ಲಿ ಜುಟ್ಟು ಬಿಟ್ಟುಕೊಂಡು ಬರುತ್ತಿದ್ದರು.

***

